ಕರ್ನಾಟಕ ಸರ್ಕಾರ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
**ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್**
**ನಿರ್ಮಲ ಭಾರತ್ ಅಭಿಯಾನ**

ಸಂಖ್ಯೆ : ಗ್ರಾಅಪ/ರಾನೀನೈಮಿ/ನಿಭಾಅ/28/2012-13/215 ದಿನಾಂಕ :26.07.2013

**ಸುತ್ತೋಲೆ**

**ವಿಷಯ:** ನಿರ್ಮಲ ಭಾರತ ಅಭಿಯಾನದಡಿ ನಡೆಸಿರುವ 2012ರ ಬೇಸ್ ಲೈನ್ ಸರ್ವೆ ವರದಿಯನ್ನು ಪಂಚತಂತ್ರದಲ್ಲಿ ಅಳವಡಿಸುವ ಕುರಿತು.

**ಉಲ್ಲೇಖ** ಗ್ರಾಅಪ/ರಾನೀನೈಮಿ/ನಿಭಾಅ/ಸುತ್ತೋಲೆ-22/2013-14,ದಿ:10.07.2013

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಿರ್ಮಲ ಭಾರತ ಅಭಿಯಾನದಡಿ ಗ್ರಾಮ ಪಂಚಾಯಿತಿವಾರು ಬೇಸ್‌ಲೈನ್ ಸಮೀಕ್ಷೆಯನ್ನು ಕೈಗೊಂಡು ಕೇಂದ್ರ ಸರ್ಕಾರದ ವೆಬ್‌ಸೈಟ್‌ನಲ್ಲಿ ಶೌಚಾಲಯ ಹೊಂದಿರುವ ಹಾಗೂ ಹೊಂದಿಲ್ಲದ ಕುಟುಂಬಗಳ ಸಂಖ್ಯೆಯನ್ನು ನಮೂದಿಸಲಾಗಿರುತ್ತದೆ. ಅದರಂತೆ ಗ್ರಾಮ ಪಂಚಾಯಿತಿಗಳಲ್ಲಿ ಫಲಾನುಭವಿವಾರು ಮಾಹಿತಿಯನ್ನು ಪಂಚತಂತ್ರದಲ್ಲಿ ಅಳವಡಿಸಲು ಹೊಸದಾಗಿ ನಮೂನೆಯನ್ನು ಸಿದ್ಧಪಡಿಸಲಾಗಿದೆ. ಜಿಲ್ಲೆಗಳು ಕೆಳಗೆ ಸೂಚಿಸಿರುವಂತೆ ಕ್ರಮವಹಿಸುವುದು.

1. ಗ್ರಾಮ ಪಂಚಾಯಿತಿಗಳಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಎರಡು ವಾರದೊಳಗೆ ಸಂಪೂರ್ಣ ಫಲಾನುಭವಿವಾರು ವರದಿಯನ್ನು ದಾಖಲಿಸಲು ಅನುವಾಗುವಂತೆ, ಈಗಾಗಲೇ ನಡೆಸಿರುವ ಹಾಗೂ ಗ್ರಾಮ ಸಭೆಯಲ್ಲಿ ಅನುಮೊದಿತ ಬೇಸ್‌ಲೈನ್ ಸರ್ವೆ-2012ರ ವರಿದಿಯನ್ನು ಸಿದ್ಧಪಡಿಸಿಕೊಂಡು ಪಂಚತಂತ್ರದಲ್ಲಿ ದಾಖಲಿಸಲು ಕ್ರಮ ಕೈಗೊಳ್ಳವುದು.
2. ಪಂಚತಂತ್ರದಲ್ಲಿ ಫಲಾನುಭವಿಗಳ ವಿವರ ದಾಖಲಿಸಲು ದಿನಾಂಕ 01.08.2013 ರಿಂದ 15.08.2013ರ ವರೆಗೆ ಮಾತ್ರ ಅವಕಾಶವಿರುತ್ತದೆ.
3. ಇದರ ಮೇಲ್ವಿಚಾರಣೆಗಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲೆಯಲ್ಲಿ M&E ಸಮಾಲೋಚಕರನ್ನು ಗುರುತಿಸಿ ರಾಜ್ಯ ಕಚೇರಿಗೆ ಮಾಹಿತಿ ದಿನಾಂಕ 01.08.2013ರೊಳಗೆ ನೀಡುವುದು.
4. M&E ಸಮಾಲೋಚಕರಿಗೆ ಪಂಚತಂತ್ರದಲ್ಲಿ ದಾಖಲಿಸುವ ಕಾರ್ಯದ ಸಂಪೂರ್ಣ ಉಸ್ತವಾರಿ ಮತ್ತು ಜವಾಬ್ದಾರಿ ವಹಿಸಿ, ಎಲ್ಲಾ ಗ್ರಾಮ ಪಂಚಾಯಿತಿಗಳ ಡಾಟ ಎಂಟ್ರಿ ಆಪರೇಟರ್‌ಗಳಿಗೆ ತರಬೇತಿ ನೀಡಿವುದು.
5. ಪಂಚತಂತ್ರದಲ್ಲಿ ದಾಖಲಿಸುವ ವಿಧಾನದ Phase-Iಮಾದರಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ಅದರಂತೆ ಸೂಕ್ತ ಕ್ರಮಕೈಗೊಳ್ಳಲು ಸೂಚಿಸಿದೆ.
6. Phase-II ಮಾದರಿಯ ಬಗ್ಗೆ ಮತ್ತೋಂದು ಸುತ್ತೋಲೆಯನ್ನು ನೀಡಲಾಗುವುದು.

ತಮ್ಮ ವಿಶ್ವಾಸಿ

Hemalatha P

ಮಿಷನ್ ನಿರ್ದೇಶಕರು,
ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ ಹಾಗೂ
ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿಗಳು,
ಗ್ರಾ. ಅ ಮತ್ತು ಪಂಚಾಯತ್ ರಾಜ್ ಇಲಾಖೆ.

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತಿಗಳು,

**ಪ್ರತಿಯನ್ನು,**

1. ಪ್ರಧಾನ ಕಾರ್ಯದಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.
2. ಕಾರ್ಯದಶಿಗಳು (ಪಂ.ರಾ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಕಾರ್ಯದರ್ಶಿಯವರ ಮಾಹಿತಿಗಾಗಿ.
3. ಹಿರಿಯ ತಾಂತ್ರಿಕ ನಿರ್ದೇಶಕರು, ರಾಷ್ಟ್ರೀಯ ಮಾಹಿತಿ ಕೇಂದ್ರ(NIC), 3ನೇ ಮಹಡಿ, ವಾಣಿಜ್ಯ ತೆರಿಗೆ ಕಟ್ಟಡ, ಬೆಂಗಳೂರು.

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು - 560 009.
ದೂರವಾಣಿ ಸಂ.22221861/62 : - ಫ್ಯಾಕ್ಸ್ :-22221862 E-mail : wsrdpr@gmail.com

## NIRMAL BHARATH ABHIYAN

## BASELINE SURVEY 2012 DATA ENTRY UPDATION PROCESS

### I PHASE

